ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಗ್ರಾಮೀಣ ಕೈಗಾರಿಕೆಗಳು
ಜಿಲ್ಲಾ ಪಂಚಾಯತ್, ಮೈಸೂರು

ಉಪ ನಿರ್ದೇಶಕರು(ಗ್ರಾ.ಕೈ)ರವರ ಕಛೇರಿ,
ಸಿ.ಟಿ.ಐ.ಕಟ್ಟಡ, ಸಯ್ಯಾಜಿರಾವ್ ರಸ್ತೆ,
ಮೈಸೂರು. ಕಛೇರಿ/Off: 0821-2563370

ಸಂಖ್ಯೆ:ಕೈವಾಇ/ಗ್ರಾಕೈ/ಜಿಪಂಮೈ/ಅನ್‌ಲೈನ್ ಅರ್ಜಿ/2026–27 ದಿನಾಂಕ:14/08/2026

ಗೆ,
ಉಪನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಮೈಸೂರು.

ಮಾನ್ಯರೇ,

ವಿಷಯ:–ಇಲಾಖೆಯ ವಿವಿಧ ಯೋಜನೆಯಡಿ ಸೌಲಭ್ಯ ಪಡೆಯಲು ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರತಿಕೆಯಲ್ಲಿ ಪ್ರಕಟಿಸುವ ಬಗ್ಗೆ.

****

ವಿಷಯಕ್ಕೆ ಸಂಬಂಧಿಸಿದಂತೆ, 2026–27ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ/ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಿಕೊಂಡು ಹೋಗಲು ಇಲಾಖಾ ಸೌಲಭ್ಯವನ್ನು ಪಡೆಯಲು ಇಚ್ಛಿಸಿದಲ್ಲಿ, ಅನುಬಂಧದಲ್ಲಿರುವ ಮಾಹಿತಿಯಂತೆ ಸಂಬಂದಪಟ್ಟ ಎಲ್ಲಾ ದಾಖಲಾತಿಗಳನ್ನು https://mysore.nic.in websiteನಲ್ಲಿ ದಿನಾಂಕ:17/08/2026 ರಿಂದ 30/08/2026ರೊಳಗೆ ಅಪ್‌ಲೋಡ್ ಮಾಡಿ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ, ಖಾದಿ ಮತ್ತು ಗ್ರಾಮೋದ್ಯೋಗ, ಜಿಲ್ಲಾ ಪಂಚಾಯತ್, ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು ಇಲ್ಲಿ ಸಂಪರ್ಕಿಸುವುದು.

ಸದರಿ ಪ್ರಕಟಣೆಯನ್ನು ತಮ್ಮ ಇಲಾಖೆಯ ಮುಖಾಂತರ ಜಿಲ್ಲಾ ಮಟ್ಟದ ಹಾಗೂ ಸ್ಥಳೀಯ ಕನ್ನಡ ದಿನ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಬೇಕಾಗಿ ತಮ್ಮನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು
ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗ
& ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿಲ್ಲಾ ಪಂಚಾಯತ್, ಮೈಸೂರು.

ಪ್ರತಿಯನ್ನು:–
1) The District Informatics Officer, District Informatics Center,Mysore District, Mysore.
2) ಕಛೇರಿ ಪ್ರತಿ.

Annexure

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಗ್ರಾಮೀಣ ಕೈಗಾರಿಕೆಗಳು
ಜಿಲ್ಲಾ ಪಂಚಾಯತ್, ಮೈಸೂರು

ಉಪ ನಿರ್ದೇಶಕರವರ ಕಛೇರಿ,
ಗ್ರಾಮೀಣ ಕೈಗಾರಿಕೆ ವಿಭಾಗ,
ಜಿಲ್ಲಾ ಪಂಚಾಯತ್, ಕೈಗಾರಿಕೆ ಇಲಾಖೆ,
ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು
ದಿನಾಂಕ: 14/08/2026

ಕ್ರ.ಸಂ	ಯೋಜನೆ ವಿವರ	ಅರ್ಜಿಯೊಂದಿಗೆ ಸಲ್ಲಿಸಲು ಬೇಕಾದ ದಾಖಲಾತಿಗಳು
01	ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ ವಿದ್ಯುತ್‌ಚಾಲಿತ ಹೊಲಿಗೆಯಂತ್ರಗಳನ್ನು ಪಡೆಯುವವರು	1) ಪಾಸ್ಪೋರ್ಟ್ ಗಾತ್ರದ ಭಾವಚಿತ್ರ (in JPG format) 2) ಜಾತಿ ಪ್ರಮಾಣ ಪತ್ರ (in PDF file) (SC, ST, Minority) 3) ಹೊಲಿಗೆ ತರಬೇತಿ ಪಡೆದ ಪ್ರಮಾಣ ಪತ್ರ ಅಥವಾ ಆಯಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಂದ ಧೃಡೀಕರಣ ಪತ್ರ/ ಕಾರ್ಮಿಕ ಇಲಾಖೆಯಿಂದ ವಿತರಿಸಿದ ಕುಶಲಕರ್ಮಿ ಗುರುತಿನ ಚೀಟಿ ಪ್ರತಿ. (in PDF file)
02	ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ ಯೋಜನೆಯಡಿ ಸಹಾಯಧನ ಪಡೆಯುವವರು	1) ಪಾಸ್ಪೋರ್ಟ್ ಗಾತ್ರದ ಭಾವಚಿತ್ರ (in JPG format) 2) ಜಾತಿ ಪ್ರಮಾಣ ಪತ್ರ (in PDF file) (SC, ST, Minority) 3) ಬ್ಯಾಂಕ್ ಪಾಸ್ ಪುಸ್ತಕ (in PDF file) 4) ಬಡ್ಡಿ ಸಹಾಯಧನ ನಮೂನೆ (in PDF file) 5) ನಿಗದಿತ ನಮೂನೆಯಲ್ಲಿ ಬ್ಯಾಂಕ್‌ನಿಂದ ಸಾಲ ಮಂಜೂರಾತಿ ಹಾಗೂ ಬಿಡುಗಡೆಯಾಗಿರುವ ಪತ್ರ (in PDF file) 6) ಉದ್ಯಮ ನೊಂದಣಿ ಪತ್ರ (in PDF file) 7) ಸ್ಥಳೀಯ ಸಂಸ್ಥೆಯಿಂದ ಪಡೆದ ಪರವಾನಿಗೆ ಪತ್ರ (in PDF file)

ಉಪ ನಿರ್ದೇಶಕರು
ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗ
& ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿಲ್ಲಾ ಪಂಚಾಯತ್, ಮೈಸೂರು.